# 7 ಅಪ್‌ನಿಂದ ಡ್ಯಾನ್ಸ್ ಆನ್ ನೃತ್ಯ ಸ್ಪರ್ಧೆ

**ಬೆಂಗಳೂರು:** ಸೆವೆನ್ ಅಪ್ ಕುಡಿಯುವವರಿಗಾಗಿ 51 ಲಕ್ಷ ರೂ.ಗಳ ದೊಡ್ಡ ಮೊತ್ತವುಳ್ಳ ಬಹುಮಾನದ ಡ್ಯಾನ್ಸ್ ಆನ್ ನೃತ್ಯ ಸ್ಪರ್ಧೆಯನ್ನು ಪೆಪ್ಸಿಕೋ ಇಂಡಿಯಾ ಕಂಪನಿ ಆಯೋಜಿಸಿದೆ.

7 ಅಪ್ ಡ್ಯಾನ್ಸ್ ಆನ್ ನೃತ್ಯವು ಕರ್ನಾಟಕದ 13 ನಗರಗಳು ಸೇರಿ ತಮಿಳುನಾಡು ಮತ್ತು ಕೇರಳಗಳಲ್ಲಿ ವರ್ಷಪೂರ್ತಿ ನಡೆಯಲಿದೆ. ಮಂಗಳವಾರ ನಗರದ ಖಾಸಗಿ ಹೋಟೇಲಿನಲ್ಲಿ ನಡೆದ ಕಾರ್ಯಕ್ರಮದಲ್ಲಿ 7 ಅಪ್ ಬ್ರಾಂಡ್ ಅಂಬಾಸಿಡರ್ ಆಗಿರುವ ಚಿತ್ರನಟ ಪುನೀತ್ ರಾಜ್‌ಕುಮಾರ್ ಪ್ರಚಾರಾಂದೋಲನಕ್ಕೆ ಚಾಲನೆ ನೀಡಿದರು.

ನೃತ್ಯ ಉತ್ಸಾಹಿಗಳು 7 ಅಪ್ ಅಥವಾ ನಿಂಬೂಝ್‌ನ 7 ಪೆಟ್



ಡ್ಯಾನ್ಸ್ ಆನ್ ನೃತ್ಯ ಸ್ಪರ್ಧೆ ಪ್ರಚಾರಾಂದೋಲನಕ್ಕೆ ಪುನೀತ್ ಚಾಲನೆ ನೀಡಿದರು. ಪೆಪ್ಸಿಕೋ ಕಂಪನಿಯ ರುಚಿರಾ ಜೈಟ್ಲಿ ಇದ್ದರು.

ಬಾಟಲಿಗಳು ಅಥವಾ ಕ್ಯಾನ್ ಅನ್ನು ತಮ್ಮ ನಗರದಲ್ಲಿ ನಡೆಯುವ ಆಡಿಷನ್‌ಗೆ ತರುವ ಮೂಲಕ ಇದರಲ್ಲಿ ಭಾಗವಹಿಸಬಹುದು. ಚೆನ್ನೈನಲ್ಲಿ ಅಂತಿಮ ಸುತ್ತಿನ ನೃತ್ಯ ನಡೆಯಲಿದೆ. ಪುನೀತ್ ರಾಜ್ ಕುಮಾರ್ ಮತ್ತು ತಮಿಳು ಚಿತ್ರನಟ ಸಿಂಬು ತೀರ್ಪುಗಾರರಾಗಿರುತ್ತಾರೆ ಎಂದು ಪೆಪ್ಸಿಕೊ ಇಂಡಿಯಾ ಬೆವರೇಜಸ್ (ಫ್ಲೇವರ್ಸ್) ಮಾರ್ಕೆಟಿಂಗ್ ವಿಭಾಗದ ರುಚಿರಾ ಜೈಟ್ಲಿ ತಿಳಿಸಿದರು.

7 ಅಪ್ ಡ್ಯಾನ್ಸ್ ಆನ್ ನಿಮ್ಮೊಳಗಿನ ನೃತ್ಯಗಾರರನ್ನು ಅನಾವರಣಗೊಳಿಸಲಿದೆ. ಅತ್ಯುತ್ತಮ, ಅಪರೂಪದ ನೃತ್ಯ ನಡೆಗಳ ಅನಾವರಣಕ್ಕೆ ವೇದಿಕೆಯಾಗಲಿದೆ ಎಂದು ನಟ ಪುನೀತ್‌ರಾಜ್ ಕುಮಾರ್ ಹೇಳಿದರು.